ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯಿಂದ....

# ಸೂಜಿ-ದಾರ

ಸಂಪುಟ : 7 ಸಂಚಿಕೆ : 1 ಪುಟ : 4 ಖಾಸಗಿ ಪ್ರಸಾರಕ್ಕಾಗಿ ಜನವರಿ–ಫೆಬ್ರವರಿ 2012

## ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)ನ ಐತಿಹಾಸಿಕ ಚುನಾವಣೆ

ಆತ್ಮೀಯ ಕಾರ್ಮಿಕರೇ, ನಿಮಗೆಲ್ಲರಿಗೂ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಹಾಗೂ GATWU ಸಂಘಟನೆಗಳು 2012ರ ಹೊಸ ವರ್ಷದ ಶುಭಾಶಯಗಳನ್ನು ತಿಳಿಸುತ್ತಿವೆ.

ಯಾವುದೇ ಒಂದು ಚಳವಳಿ ಮತ್ತು ಹೋರಾಟಗಳು ತಮ್ಮ ಗುರಿಯನ್ನು ಯಶಸ್ವಿಯಾಗಿ ಸಾಧಿಸಬೇಕಾದರೆ ಅವುಗಳ ಪ್ರಜಾಸತ್ತಾತ್ಮಕ ನಡವಳಿಕೆಯಿಂದ ಮಾತ್ರ ಸಾಧ್ಯ. GATWU ಈ ರೀತಿಯ ಪ್ರಜಾ ಸತ್ತಾತ್ಮಕ ನಡವಳಿಕೆಯಲ್ಲಿ ಬಹಳ ನಂಬಿಕೆ ಇರಿಸಿದೆ. ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ತನ್ನ ಪದಾಧಿಕಾರಿಗಳು ಹಾಗೂ ಕಾರ್ಯಕಾರೀ ಸಮಿತಿಯ ಸ್ಥಾನಗಳಿಗೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಚುನಾವಣೆ ನಡೆಸಿದೆ. ಗಾರ್ಮೆಂಟ್ಸ್ ಕಾರ್ಮಿಕರ ಜನರಲ್ ಯೂನಿಯನ್ ಒಂದು ತನ್ನ ಕಾರ್ಯಕಾರೀ ಸಮಿತಿಯನ್ನು ನಿಷ್ಪಕ್ಷಪಾತ ಮತ್ತು ಪಾರದರ್ಶಕ ರೀತಿಯಲ್ಲಿ ಚುನಾವಣೆಯ ಮೂಲಕ ಆರಿಸಿರುವುದು, ಬೆಂಗಳೂರಿನ ಮಟ್ಟಿಗೆ ಐತಿಹಾಸಿಕವೇ ಆಗಿದೆ. ಈ ಮೂಲಕ GATWU ಹೆಚ್ಚು ಪ್ರಜಾಸತ್ತಾತ್ಮಕವಾಗಿ, ಸ್ವತಂತ್ರವಾಗಿ ಬೆಳೆದು ಕಾರ್ಮಿಕರ ಹಿತಾಸಕ್ತಿಗೆ ಕೆಲಸ ಮಾಡಲು ಸಾಧ್ಯವಾಗುತ್ತದೆ.

GATWU 2006 ರಲ್ಲಿ ನೋಂದಣಿಯಾಗಿದ್ದರೂ, ಕಾರಣಾಂತರಗಳಿಂದ ಪ್ರಜಾಸತ್ತಾತ್ಮಕವಾಗಿ ಚುನಾವಣೆ ನಡೆಸಲು ಸಾಧ್ಯವಾಗಿರಲಿಲ್ಲ. ದಿನಾಂಕ 10.7.2011 ರಂದು GATWU ವಿನ ಅಧ್ಯಕ್ಷರಾದ ಶ್ರೀ ಅಶೀಮ್ ರಾಯ್ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕಾರೀ ಸಮಿತಿಯ ಸಭೆ ಸೇರಿ ಚುನಾವಣೆ ನಡೆಸಲು ತೀರ್ಮಾನಿಸಲಾಯಿತು. ಈ ಸಭೆ ಮತ್ತು ಎಲ್ಲಾ ಚುನಾವಣಾ ಪ್ರಕ್ರಿಯೆಗಳಲ್ಲಿ ವೀಕ್ಷಕರಾಗಿರಬೇಕೆಂದು ವಿಮೋಚನಾ ಸಂಸ್ಥೆಯ ಶಕೂನ್ ಮೋಹಿನಿ, ಸಾಮಾಜಿಕ ಕಾರ್ಯಕರ್ತರಾದ ದು.ಸರಸ್ವತಿ ಹಾಗೂ ಸಮಾನತಾ ಮಹಿಳಾ ವೇದಿಕೆಯ ಸುಷ್ಮಾ ಅವರನ್ನು ಕೇಳಿಕೊಳ್ಳಲಾಯಿತು. ಅದಕ್ಕೆ ಅವರು ಒಪ್ಪಿ ಮೊದಲಿನಿಂದ ಕೊನೆಯವರೆಗೂ ಎಲ್ಲಾ ಪ್ರಕ್ರಿಯೆಯಲ್ಲಿಯೂ ಸಕ್ರಿಯವಾಗಿ ಭಾಗವಹಿಸಿದರು.

ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯುತ್ತಿರುವವರು ಹೆಚ್ಚಿನವರು ಮಹಿಳೆಯರು. ಮಹಿಳೆಯರು ಯೂನಿಯನ್ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ ಎಂಬ ಅಪವಾದವನ್ನು ಸುಳ್ಳಾಗಿಸುವಂತೆ, GATWUವಿನ ನಾಯಕತ್ವ ವಹಿಸಲು ಮಹಿಳಾ ಕಾರ್ಮಿಕರಲ್ಲಿ ಸ್ಪರ್ಧೆ ಮೂಡಿರುವುದು ಐತಿಹಾಸಿಕ ಸತ್ಯವಾಗಿದೆ. ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಮತ್ತು GATWU ಕಳೆದ 7 ವರ್ಷಗಳಿಂದ ನಿರಂತರವಾಗಿ ಕಾರ್ಮಿಕರನ್ನು ಸಂಘಟಿಸಿದ ಫಲವಾಗಿ ಇಂದು ಈ ಪರಿಣಾಮ ಕಾಣಲು ಸಾಧ್ಯವಾಗಿದೆ.

### ಚುನಾವಣೆ ನಡೆಸಲು ತೀರ್ಮಾನ

ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ 2011–2014 ನೇ ಸಾಲಿಗೆ ತನ್ನ ಪದಾಧಿಕಾರಿಗಳು ಹಾಗೂ ಕಾರ್ಯಕಾರೀ ಸಮಿತಿಯ ಸದಸ್ಯರನ್ನು ಆರಿಸಲು ಚುನಾವಣೆ ನಡೆಸಲು ನಿರ್ಧರಿಸಿದ ನಂತರ ನಡೆದ ಬೆಳವಣಿಗೆಗಳು, ಚುನಾವಣೆಯಂತಹ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಹೆಚ್ಚು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು.

ಜುಲೈ ತಿಂಗಳಲ್ಲಿ ನಡೆದ ಯೂನಿಯನ್‌ನ ಕಾರ್ಯ ಕಾರೀ ಸಮಿತಿಯ ಸದಸ್ಯರು ಹಾಗೂ ಕಾರ್ಮಿಕ ನಾಯಕರ ಸಭೆಯಲ್ಲಿ ಚುನಾವಣೆ ನಡೆಸಬೇಕೆಂಬ ತೀರ್ಮಾನಕ್ಕೆ ಬರಲಾಯಿತು. GATWU ನಲ್ಲಿ ಸುಮಾರು 4625 ಸದಸ್ಯರಿದ್ದು, ಪ್ರತಿ 10 ಕಾರ್ಮಿಕರಿಗೆ ಒಬ್ಬ ಕಾರ್ಮಿಕ ಪ್ರತಿನಿಧಿ (ಡೆಲಿಗೇಟ್)ಗಳು ಬಂದು ಚುನಾವಣೆಯಲ್ಲಿ ಮತ ಚಲಾಯಿಸಬಹುದೆಂದು ತೀರ್ಮಾನಿಸಲಾಯಿತು.

ಅದೇ ಸಭೆಯಲ್ಲಿ ಕಾರ್ಮಿಕ ಪ್ರತಿನಿಧಿಗಳ ಪಟ್ಟಿಯನ್ನು ಅಂತಿಮ ಗೊಳಿಸಲು GATWU ಅಧ್ಯಕ್ಷರು, ಮತ್ತು ಪ್ರಧಾನ ಕಾರ್ಯದರ್ಶಿಯವರನ್ನೂ ಒಳಗೊಂಡಂತೆ ಒಂದು ಉಪ ಸಮಿತಿಯನ್ನು ರಚಿಸಲಾಯಿತು. ಅದರಂತೆ ಈ ಉಪಸಮಿತಿಯು




Scanned with OKEN Scanner

ಸೆಪ್ಟೆಂಬರ್ 14 ಹಾಗೂ ಅಕ್ಟೋಬರ್ 8 ರಂದು ಸಭೆ ಸೇರಿತ್ತು. ಮತದಾರರ ಪಟ್ಟಿಯನ್ನು ಅಂತಿಮಗೊಳಿಸಿದ ನಂತರ, ಅಕ್ಟೋಬರ್ 23 ರಂದು ಚುನಾವಣೆ ನಡೆಸಲು ನಿರ್ಣಯಿಸಿತು.



ಮತ ಪೆಟ್ಟಿಗೆಯನ್ನು ಸೀಲ್ ಮಾಡುತ್ತಿರುವುದು

## ಚುನಾವಣಾಧಿಕಾರಿಗಳು

GATWU ವಿನ ಚಟುವಟಿಕೆಗಳಿಗೆ ಮೊದಲಿನಿಂದಲೂ ತಮ್ಮ ಬೆಂಬಲ ಹಾಗೂ ಸಹಕಾರ ಕೊಡುತ್ತಲೇ ಬಂದಿರುವ ಹೆಚ್.ಎಮ್.ಕೆ.ಪಿಯ ಮುಖಂಡರಾದ ಶ್ರೀ ಮೈಕೆಲ್ ಫರ್ನಾಂಡಿಸ್ ಅವರನ್ನು ಚುನಾವಣಾಧಿಕಾರಿಗಳಿಗಾಗಿ ಸಲಹೆ ಕೇಳಲಾಯಿತು. ಅವರು ಹೆಚ್.ಎಮ್.ಕೆ.ಪಿಯ ಯ ಖಜಾಂಚಿಗಳು ಹಾಗೂ ಐ.ಟಿ.ಐ ಕಾರ್ಮಿಕ ಸಂಘದ ಕಾರ್ಮಿಕ ಮುಖಂಡರಾದ ಶ್ರೀ ಬಿ.ಆರ್.ಎನ್ ರಾಜನ್ ಅವರನ್ನು ಸೂಚಿಸಿದರು. ಶ್ರೀ ಬಿ.ಆರ್.ಎನ್ ರಾಜನ್, ಅವರು ತಮ್ಮ ಹಲವಾರು ಕೆಲಸದ ಒತ್ತಡದ ನಡುವೆಯೂ, ಚುನಾವಣಾಧಿಕಾರಿಗಳಾಗಿ GATWU ವಿನ ಚುನಾವಣೆ ನಡೆಸಿಕೊಡಲು ಒಪ್ಪಿಕೊಂಡರು. ಶ್ರೀ ತಿಪ್ಪರುದ್ರೇಗೌಡ ಹಾಗೂ ಶ್ರೀ ಸತ್ಯನಾರಾಯಣ ಅವರು ಉಪಚುನಾವಣಾಧಿಕಾರಿ ಗಳಾಗಿರಲು ಒಪ್ಪಿದರು. ಅದರಂತೆಯೇ ತುಂಬ ಶಿಸ್ತಿನಿಂದ, ಕಟ್ಟುನಿಟ್ಟಾಗಿ, ಪಾರದರ್ಶಕವಾಗಿ ಚುನಾವಣೆಯನ್ನು ನಡೆಸಿಕೊಟ್ಟರು.



ಗುರುತಿನ ಚೀಟಿ ಪಡೆಯುತ್ತಿರುವ ಕಾರ್ಮಿಕರು

## ಚುನಾವಣಾ ಪ್ರಕ್ರಿಯೆ

ಒಟ್ಟು 19 ಕಾರ್ಯಕಾರೀ ಸಮಿತಿಯ ಸದಸ್ಯರುಗಳಿಗೆ ಚುನಾವಣೆ ನಡೆಯಬೇಕಿದ್ದು, ದಿನಾಂಕ 8.10.2011 ರಿಂದ ಚುನಾವಣಾ ಪ್ರಕ್ರಿಯೆ ಪ್ರಾರಂಭವಾಯಿತು.

| | | | |
|---|---|---|---|
| ಮತದಾರರ ಪ್ರಾಥಮಿಕ ಪಟ್ಟಿ ಪ್ರಕಟಣೆ | ಶನಿವಾರ | 8.10.2011 | ಮಧ್ಯಾ.ಹ. 3 ಗಂಟೆಗೆ |
| ಮತದಾರರ ಪಟ್ಟಿಗೆ ತಿದ್ದುಪಡಿ ಇದ್ದಲ್ಲಿ ಅರ್ಜಿ ಸಲಿಸಲು ಕೊನೆಯ ದಿನಾಂಕ | ಸೋಮವಾರ | 10.10.2011 | ಮಧ್ಯಾಹ್ನ 4 ಗಂಟೆಯವರೆಗೂ |
| ಮತದಾರರ ಅಂತಿಮ ಪಟ್ಟಿ ಪ್ರಕಟಣೆ | ಮಂಗಳವಾರ | 11.10.2011 | ಬೆಳಿಗೆ 11 ಗಂಟೆಗೆ |
| ನಾಮಪತ್ರ ಪಡೆಯುವ ಮತ್ತು ಹಿಂತಿರುಗಿಸುವ ದಿನಾಂಕ | ಬುಧವಾರ ಮತ್ತು ಗುರುವಾರ | 12.10.2011 13.10.2011 | ಮಧ್ಯಾಹ್ನ 2 ರಿಂದ 3.30 ರ ವರೆಗೆ |
| ಅಭ್ಯರ್ಥಿಗಳ ನಾಮಪತ್ರ ಪರಿಶೀಲನೆ ಅನಂತರ ಅಭ್ಯರ್ಥಿಗಳ ಪ್ರಾಥಮಿಕ ಪಟ್ಟಿಯ ಪ್ರಕಟಣೆ | ಶುಕ್ರವಾರ | 14.10.2011 | ಮಧ್ಯಾಹ್ನ 4 ಗಂಟೆಗೆ |
| ನಾಮಪತ್ರವನ್ನು ಹಿಂದಕ್ಕೆ ಪಡೆಯಲು ಕೊನೆಯ ದಿನಾಂಕ | ಸೋಮವಾರ | 17.10.2011 | ಮಧ್ಯಾಹ್ನ 2 ರಿಂದ 3.30 ರ ವರೆಗೆ |
| ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಣೆ | ಮಂಗಳವಾರ | 18.10.2011 | ಬೆಳಿಗ್ಗೆ 11 ಗಂಟೆಗೆ |



ಮೊದಲ ಮತದಾನ.....



ಚುನಾವಣಾ ವೀಕ್ಷಕರು ಸುಷ್ಮಾ, ಶಕೂನ್ ಮೋಹಿನಿ, ದು. ಸರಸ್ವತಿ,

## ಚುನಾವಣೆ ಘೋಷಣೆ

ಕಾರ್ಯಕಾರೀ ಸಮಿತಿಯ 19 ಸ್ಥಾನಗಳಲ್ಲಿ, ಪ್ರಧಾನ ಕಾರ್ಯದರ್ಶಿ ಮತ್ತು ಉಪಾಧ್ಯಕ್ಷರ ಸ್ಥಾನಕ್ಕೆ ಮಾತ್ರ ಸ್ಪರ್ಧೆ ಏರ್ಪಟ್ಟಿದ್ದರಿಂದ ಈ ಎರಡೂ ಸ್ಥಾನಕ್ಕೆ ಚುನಾವಣೆ ಘೋಷಣೆಯಾಯಿತು. ಇತರ ಸ್ಥಾನಗಳಿಗೆ ಸ್ಪರ್ಧೆ ಇಲ್ಲದುದರಿಂದ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾದರು.



ಮತಗಳ ವಿಂಗಡಣೆ ಮತ್ತು ಎಣಿಕೆ

ಚುನಾವಣೆಯನ್ನು ದಿನಾಂಕ 23.10.2011 ರಂದು ಮಿಷನ್ ರಸ್ತೆಯಲ್ಲಿರುವ ಎಸ್.ಸಿ.ಎಮ್ ಹೌಸ್‌ನಲ್ಲಿ ಪಾರದರ್ಶಕವಾಗಿ ನಡೆಸಲಾಯಿತು.

ಬೆಳಿಗ್ಗೆ 10.30ಕ್ಕೆ ಆರಂಭವಾದ ಚುನಾವಣೆ ಮಧ್ಯಾಹ್ನ 3 ಗಂಟೆಗೆ ಮುಕ್ತಾಯವಾಯಿತು. ಮತದಾರರ ಪಟ್ಟಿಯಲ್ಲಿದ್ದ 210 (2100 ಕಾರ್ಮಿಕರು) ಕಾರ್ಮಿಕ ಪ್ರತಿನಿಧಿ ಮತದಾರರಲ್ಲಿ 188 (1880 ಕಾರ್ಮಿಕರು) ಪ್ರತಿನಿಧಿ ಮತದಾರರು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಮ್ಮ ಮತ ಚಲಾಯಿಸಿದರು.



ಅಧ್ಯಕ್ಷರಾದ ಅಶೀಮ್‌ರಾಯ್ ಮಾತನಾಡುತ್ತಿರುವುದು

**ಗಲಿಬಿಲಿ ವರ್ತನೆ, ದುಡುಕಿನ ಮನೋಭಾವನೆ ನಾಯಕತ್ವದ ವಿರೋಧಿ. ವಿವೇಕದಿಂದ ನಮ್ಮ ಸರದಿ ಬರುವವರೆಗೂ ಕಾಯಬೇಕು.**



Scanned with OKEN Scanner

**ಫಲಿತಾಂಶ**

ಚುನಾವಣೆಯ ದಿನದಂದೇ ಸಂಜೆ 4 ಗಂಟೆಗೆ ಸ್ಪರ್ಧಿಸಿದ್ದ ಅಭ್ಯರ್ಥಿಗಳು, ಅವಿರೋಧವಾಗಿ ಆಯ್ಕೆಯಾಗಿದ್ದ ಕಾರ್ಯಕಾರಿ ಸಮಿತಿಯ ಸದಸ್ಯರು, ಹಾಗೂ ಸುಮಾರು 50 ಕಾರ್ಮಿಕ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಮತಗಳ ಎಣಿಕೆ ನಡೆಸಿ ಫಲಿತಾಂಶ ಘೋಷಿಸಲಾಯಿತು. ಚುನಾವಣೆ ನಡೆದ ಸ್ಥಾನಗಳಿಗೆ ಸ್ಪರ್ಧಿಸಿದ್ದ 2 ಉಪಾಧ್ಯಕ್ಷ ಹಾಗೂ 1 ಜನರಲ್ ಸೆಕ್ರಟರಿ ಸ್ಥಾನಗಳಿಗೆ ಕ್ರಮವಾಗಿ ಪ್ರತಿಭಾ ಆರ್. ಪುಟ್ಟಮ್ಮ, ಹಾಗೂ ರತ್ನ ಕೆ.ಪಿ ಅವರು ಆಯ್ಕೆಯಾದರು.

ಅಧ್ಯಕ್ಷರಾದ ಅಶೀಮ್ ರಾಯ್ ಅವರ ಅಧ್ಯಕ್ಷತೆಯಲ್ಲಿ, ಅದೇ ದಿನ ಸಂಜೆ ಮೊದಲ ಕಾರ್ಯಕಾರೀ ಸಮಿತಿಯ ಸಭೆಯು ನಡೆಯಿತು.

**ಚುನಾವಣೆಗಾಗಿ ನಡೆಸಿದ ಖರ್ಚು ವೆಚ್ಚಗಳು:**

| | |
|---|---|
| ಸ್ಥಳ ಮತ್ತು ಊಟ: | ರೂ. 18,916–00 |
| ಚುನಾವಣಾಧಿಕಾರಿಗಳ ಸಾರಿಗೆ ಮತ್ತು ಇತರ ಭತ್ಯೆ: | ರೂ. 15,100–00 |
| ಪ್ರಿಂಟಿಂಗ್ ಮತ್ತು ಸ್ಟೇಷನರಿ ಮತ್ತು ಜೆರಾಕ್ಸ್ ಖರ್ಚು: | ರೂ. 6,974–00 |
| ಒಟ್ಟು | ರೂ. 41,000–00 |

ಈ ಮೊತ್ತವನ್ನು GATWU ಭರಿಸಿದೆ.

ಈ ಚುನಾವಣೆಯು ಯಶಸ್ವಿಯಾಗಿ ನಡೆಯಲು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಹಾಗೂ ಬೆಂಬಲ ನೀಡಿದ ಎಲ್ಲಾ ಸಂಘಟನೆಗಳಿಗೂ, ಚುನಾವಣಾಧಿಕಾರಿಗಳಿಗೂ, ಎಸ್.ಸಿ.ಎಮ್ ಹೌಸ್‌ನ ಎಲ್ಲ ಸಿಬ್ಬಂದಿಗಳಿಗೂ, ಕಾರ್ಮಿಕರಿಗೂ GATWU ಈ ಮೂಲಕ ಧನ್ಯವಾದಗಳನ್ನು ಅರ್ಪಿಸುತ್ತಿದೆ. ❑



# ನೆರವು

ಟೆಕ್ಸ್‌ಪೋರ್ಟ್ಸ್ ಕ್ರಿಯೇಶನ್ಸ್‌ನಲ್ಲಿ ಕೆಲಸ ಮಾಡುತ್ತಿರುವ ಸಾಕಮ್ಮ ಅವರ ಮಗನಿಗೆ ಅನಾರೋಗ್ಯದ ಚಿಕಿತ್ಸೆಗಾಗಿ, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯ ಮಧ್ಯಸ್ಥಿಕೆಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೈದ್ಯಕೀಯ ಪರಿಹಾರ ನಿಧಿಯಿಂದ ರೂ. 50,000/– ಹಣ ದೊರೆತಿದೆ. ಮಗನ ಅನಾರೋಗ್ಯದಿಂದ ಹಾಗೂ ಹಣದ ಬಿಕ್ಕಟ್ಟಿನಿಂದ ತೊಂದರೆಗೊಳಗಾಗಿದ್ದ ಸಾಕಮ್ಮ ಅವರಿಗೆ ಈ ಪರಿಹಾರ ಮೊತ್ತವು ಬಹಳ ಸಹಾಯಕಾರಿಯಾಗಿದೆ. ಈ ಹಣವನ್ನು ಅತ್ಯಂತ ಶೀಘ್ರವಾಗಿ ಅವರಿಗೆ ದೊರಕಿಸಿಕೊಡುವಲ್ಲಿ ಕಾಳಜಿ ವಹಿಸಿದ ಬಿ.ಬಿ.ಎಂ.ಪಿ ಸದಸ್ಯರಾದ ಶ್ರೀಮತಿ ರಾಜೇಶ್ವರಿ ಬೆಳಗೋಡ್ ಅವರಿಗೆ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು ಅಭಿನಂದನೆಗಳನ್ನು ತಿಳಿಸುತ್ತಿದೆ. ಮತ್ತು ಅವರ ಈ ಸಹಕಾರ ಹೀಗೇ ಇರಬೇಕೆಂದು ಕೇಳಿಕೊಳ್ಳುತ್ತಿದೆ. ❑

**— ಕಾರ್ಮಿಕರಲ್ಲಿ ಮನವಿ —**

**ಆತ್ಮೀಯರೇ, ಇದು ನಿಮ್ಮ ಪತ್ರಿಕೆ, ನೀವು ಹಣ ನೀಡಿ ಕೊಂಡು ಓದಿದರೇ ಈ ಪತ್ರಿಕೆ ಮುಂದುವರೆಯಲು ಸಾಧ್ಯವಾಗುತ್ತದೆ. ಕಾರ್ಮಿಕರಿಗಾಗಿ ಇರುವ ಪತ್ರಿಕೆಯನ್ನು ಕಾರ್ಮಿಕರೇ ಉಳಿಸಬೇಕು. ಆದ್ದರಿಂದ ದಯವಿಟ್ಟು ಪತ್ರಿಕೆಯನ್ನು ದುಡ್ಡು ಕೊಟ್ಟು ಖರೀದಿಸಬೇಕೆಂದು ಈ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತಿದ್ದೇವೆ.**

*–ಸಂ.ಮಂ.*

# ಗಾರ್ಮೆಂಟ್ಸ್ ಕಾರ್ಖಾನೆಗಳ ಆಡಳಿತ ವರ್ಗಕ್ಕೊಂದು ಬಹಿರಂಗ ಪತ್ರ

**ಯಾವುದೇ ಕಾರ್ಖಾನೆಯಲ್ಲಿ 30 ಮಂದಿಗಿಂತ ಹೆಚ್ಚು ಮಹಿಳೆಯರು ಕೆಲಸ ಮಾಡುತ್ತಿದ್ದರೆ ಅವರ 6 ವರ್ಷದೊಳಗಿನ ಮಕ್ಕಳನ್ನು ನೋಡಿಕೊಳ್ಳಲು ಸುಸಜ್ಜಿತ ಬಾಲವಾಡಿಗಳಿರಬೇಕು. ಅಲ್ಲಿ ಮಕ್ಕಳನ್ನು ನೋಡಿಕೊಳ್ಳಲು ತರಬೇತಿ ಹೊಂದಿದ ಟೀಚರ್ ಇರಬೇಕು. ಮಕ್ಕಳಿಗೆ ಉಚಿತ ಆಹಾರ, ಹಾಲು, ಹಾಗೂ ಆಟದ ಪರಿಕರಗಳನ್ನು ಒದಗಿಸಬೇಕು. (ಕಾರ್ಮಿಕ ಕಲ್ಯಾಣ ಸೆಕ್ಷನ್ 48).**

ಬೆಂಗಳೂರಿನ ಎಲ್ಲ ದೊಡ್ಡ ದೊಡ್ಡ ಗಾರ್ಮೆಂಟ್ಸ್ ಕಾರ್ಖಾನೆಗಳು ತಮ್ಮ ಕಾರ್ಖಾನೆಯಲ್ಲಿ ಕಾರ್ಮಿಕರ ಮಕ್ಕಳಿಗಾಗಿ ಕಾನೂನು ಪ್ರಕಾರ ಬಾಲವಾಡಿಗಳನ್ನು ನಡೆಸುತ್ತಿವೆ. ಹೆಚ್ಚಿನ ಕಾರ್ಖಾನೆಗಳಲ್ಲಿ ಈ ಬಾಲವಾಡಿಗಳು ಗುಣಮಟ್ಟವನ್ನು ಕಾಯ್ದುಕೊಳ್ಳಲು ವಿಫಲವಾಗಿದೆ. ಕೆಲವು ಕಾರ್ಖಾನೆಗಳಲ್ಲಿ ತರಬೇತಿ ಹೊಂದಿದ ಟೀಚರ್ ಇರುವುದಿಲ್ಲ. ಕೆಲವೆಡೆ ಕಸ ಗುಡಿಸುವ, ಕಾಫೀ, ಟೀ ಮಾಡುವ ಸಹಾಯಕರು ಮಕ್ಕಳನ್ನು ನೋಡಿಕೊಳ್ಳುತ್ತಿದ್ದಾರೆ. ಇದರೊಂದಿಗೆ ಅವರು ಇತರ ಕೆಲಸಗಳನ್ನೂ ಸಹ ಮಾಡಬೇಕಾಗಿರುತ್ತದೆ. ಇದು ಕಾನೂನು ಬಾಹಿರ ಹಾಗೂ ಖಂಡನೀಯ. ಜೊತೆಗೆ ಇಂತಹ ಸಿಬ್ಬಂದಿ, ಮಕ್ಕಳಿಗೆ ತೊಂದರೆಯಾದ ತುರ್ತು ಸಂದರ್ಭದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಶಕ್ತರಾಗಿರುವುದಿಲ್ಲ.

14.12.2011 ರಂದು ಮೈಸೂರು ರಸ್ತೆಯಲ್ಲಿರುವ ಟೆಕ್ಸ್‌ಪೋರ್ಟ್ಸ್ ಕ್ರಿಯೇಶನ್ಸ್ ಕಾರ್ಖಾನೆಯ ಕ್ರಶ್‌ನಲ್ಲಿ 11 ತಿಂಗಳ ಹೆಣ್ಣು ಮಗುವೊಂದು ಮೃತಪಟ್ಟ ಘಟನೆ ನಡೆದಿದೆ. ಮಗುವಿನ ಸಾವಿನ ಹಿನ್ನೆಲೆ ಏನೇ ಇದ್ದರೂ ಮಗುವು ಕಾರ್ಖಾನೆಯಲ್ಲಿ ಮೃತ ಪಟ್ಟಿರುವುದರಿಂದ ಘಟನೆಯ ಸಂಪೂರ್ಣ ಜವಾಬ್ದಾರಿಯು, ಆಡಳಿತ ವರ್ಗದ್ದಾಗಿರುತ್ತದೆ. ಈ ಘಟನೆಯಾದ ನಂತರದ ಪ್ರತಿಯೊಂದು ಹಂತದಲ್ಲಿ GATWU ಮಧ್ಯ ಪ್ರವೇಶಿಸಿ ಸೂಕ್ತ ಸಲಹೆ ಮತ್ತು ಪರಿಹಾರಗಳನ್ನು ಕೊಡಿಸಲು ಪ್ರಯತ್ನಿಸುತ್ತಿದೆ. ತಂದೆ ತಾಯಿಗಳಿಗೆ ಮ್ಯಾನೇಜ್‌ಮೆಂಟ್‌ನಿಂದ ಸೂಕ್ತ ಪರಿಹಾರಕ್ಕಾಗಿ ಅಗ್ರಹಿಸಿದೆ.

ದುಡಿಯುವ ತಾಯಂದಿರ ದೊಡ್ಡ ಸಮಸ್ಯೆಯೆಂದರೆ, ತಾವು ಕೆಲಸಕ್ಕೆ ಬಂದಾಗ ತಮ್ಮ ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವುದು. ಆ ತಾಯಂದಿರು ಯಾವುದೇ ಆತಂಕವಿಲ್ಲದೆ ತಮ್ಮ ದುಡಿಮೆ ಮಾಡಲು ಕಾನೂನು ಕಾರ್ಖಾನೆಯಲ್ಲಿ ಬಾಲವಾಡಿಗಳು ಅತ್ಯಂತ ಅಗತ್ಯ. ಆಡಳಿತ ವರ್ಗದವರು, ಕೇವಲ ಅಧಿಕಾರಿಗಳ ಕಣ್ಣೊರೆಸಲು ಅಥವಾ ಬ್ರಾಂಡ್‌ಗಳ ಮೆಚ್ಚುಗೆ ಪಡೆಯಲು ನೆಪಮಾತ್ರದ ಬಾಲವಾಡಿಗಳನ್ನು ನಡೆಸದೆ, ನಿಜವಾದ ಕಾಳಜಿ ವಹಿಸಬೇಕೆಂದು ಗಾ.ಮ.ಕಾ ಮುನ್ನಡೆ ಹಾಗೂ GATWU ಆಗ್ರಹಿಸುತ್ತದೆ. ❑

**ಸಂಘಟನೆ ಸಾಂತ್ವನದ ತಾಣ, ರಕ್ಷಣೆಯ ವ್ಯವಸ್ಥೆ. ಒಟ್ಟಾಗಿದ್ದಾಗ ಯಾವುದೇ ಸಮಸ್ಯೆ ದೊಡ್ಡದು ಎನಿಸುವುದಿಲ್ಲ. ಏಕಾಂಗಿತನ ಮನುಷ್ಯ ಪ್ರವೃತ್ತಿಗೆ ವಿರುದ್ಧವಾದದ್ದು.**



Scanned with OKEN Scanner

